ಸೆಲೆಬ್ರಿಟಿ

■ ಹನಿ

# ಸಾನಿಯಾ ಷೋ!



ಮುಂಬೈಯಲ್ಲಿ ಕಳೆದ ವಾರ ಫ್ಯಾಶನ್ ಷೋ ವೀಕ್ಷಕರೆಲ್ಲ ದಂಗು ಬಡಿಯುವಂತೆ ರ್‍ಯಾಂಪ್ ಮೇಲೆ ನಡೆದಾಡಿದ ಮೂಗುತಿ ಸುಂದರಿ ಸಾನಿಯಾ ಮಿರ್ಜಾಳ ಟೆನಿಸ್ ಜೀವನ ಮುಗಿದೇ ಹೋಯಿತೆ? ಇನ್ನು ಮುಂದೆ ಟೆನಿಸ್‌ಗಿಂತ ಹೆಚ್ಚಾಗಿ ಫ್ಯಾಶನ್ ಕ್ಷೇತ್ರದಲ್ಲೇ ಸಾನಿಯಾ ತೊಡಗಿಸಿಕೊಳ್ಳಬಹುದೆ? ಸಿನಿಮಾದಲ್ಲೇನಾದರೂ ನಟಿಸುವ ಸಾಧ್ಯತೆ ಇದೆಯೆ?

–ಹೀಗೆ ಅಭಿಮಾನಿಗಳ ಮನದಲ್ಲಿ ನೂರೆಂಟು ಪ್ರಶ್ನೆಗಳನ್ನು ಮೂಡಿಸಿರುವ ಸಾನಿಯಾ (ಬರ್ತ್‌ಡೇ 15/11/1986) ಸದ್ಯಕ್ಕಂತೂ ಎಲ್ಲ ಪ್ರಶ್ನೆಗಳಿಗೆ 'ಇಲ್ಲ' ಎಂಬ ಉತ್ತರವನ್ನೇ ನೀಡುತ್ತಿದ್ದಾಳೆ. ಆದರೆ ಆಕೆ ಮುಂಬೈಯಲ್ಲಿ 'ಬ್ಲೆಂಡರ್‍ಸ್ ಪ್ರೈಡ್' ಫ್ಯಾಶನ್ ಷೋನಲ್ಲಿ ಹೆಜ್ಜೆ ಹಾಕಿದ್ದು ಮಾತ್ರ ಭರ್ಜರಿಯಾಗೇ ಇತ್ತು. ಅರ್ಧ ಬೆನ್ನು ತೋರಿಸಿದ, ಸಮುದ್ರ ನೀಲಿ ಬಣ್ಣದ ಉದ್ದನೆಯ ಲೆಹಂಗಾ ಧರಿಸಿ, ಸೊಂಟದ ಮೇಲೆ ಎರಡೂ ಕೈಗಳನ್ನಿಟ್ಟು ರ್‍ಯಾಂಪ್ ಮೇಲೆ ಆತ್ಮವಿಶ್ವಾಸದಿಂದಲೇ ನಡೆದಾಡಿದ ಸಾನಿಯಾ, ವೃತ್ತಿಪರ ಮಾಡೆಲ್ ಮಲೈಕಾಳನ್ನೂ ಮೀರಿಸಿ ಚಪ್ಪಾಳೆಗಳನ್ನು ಗಿಟ್ಟಿಸಿದ್ದು ಸುಳ್ಳಲ್ಲ. ಹಾಗೆಂದೇ ಫ್ಯಾಶನ್ ಜಗತ್ತು ಸಾನಿಯಾಳನ್ನು ಚಪ್ಪಾಳೆ ತಟ್ಟಿ ಸ್ವಾಗತಿಸಿದೆ.

2007ರಲ್ಲಿ ವಿಶ್ವದ 27ನೇ ರ್‍ಯಾಂಕ್ ಟೆನಿಸ್ ಆಟಗಾರ್ತಿಯಾಗಿದ್ದ ಸಾನಿಯಾ, ಅಲ್ಲಿಂದ ಮುಂದಕ್ಕೆ ಹೋಗಲಾಗಲಿಲ್ಲ. ಸದ್ಯಕ್ಕೆ ಆಕೆಯ ವಿಶ್ವ ರ್‍ಯಾಂಕಿಂಗ್ 286. ಡಬಲ್ಸ್‌ನಲ್ಲಿ ಮಾತ್ರ ಸಾನಿಯಾ ಅತ್ಯುತ್ತಮ ಫಾರ್ಮ್ ತೋರಿಸಿದ್ದಿದೆ. ಅದರಲ್ಲೂ ವಿಶ್ವದ 7ನೇ ರ್‍ಯಾಂಕ್ ತಲುಪಿದ್ದ ಸಾನಿಯಾ ಸದ್ಯಕ್ಕೆ 13ನೇ ರ್‍ಯಾಂಕ್‌ನಲ್ಲಿದ್ದಾಳೆ. ಬಹುಶಃ ಒಬ್ಬರೇ ಪಾರ್ಟ್‌ನರ್‌ಗೆ ಅಂಟಿಕೊಂಡಿದ್ದರೆ ಡಬಲ್ಸ್‌ನಲ್ಲಿ ಈಕೆ ವಿಶ್ವದ ನಂಬರ್ ಒನ್ ಆಗಬಹುದಿತ್ತೇನೋ. ಈ ವರ್ಷ ಮಹೇಶ್ ಭೂಪತಿ ಜತೆ ಸೇರಿ ಫ್ರೆಂಚ್ ಓಪನ್ ಡಬಲ್ಸ್ ಪ್ರಶಸ್ತಿ ಗೆದ್ದದ್ದು ಮಾತ್ರ ಈಕೆಯ ದೊಡ್ಡ ಸಾಧನೆ. ಒಲಿಂಪಿಕ್ಸ್‌ನಲ್ಲಿ ಶೂನ್ಯ ಸಂಪಾದನೆ! ಭಾರತದ ಮಟ್ಟಿಗಂತೂ ಈಕೆ 2003ರಿಂದಲೂ ನಂಬರ್ ಒನ್. ವರ್ಷಕ್ಕೆ ಒಂದು ದಶಲಕ್ಷ ಅಮೆರಿಕನ್ ಡಾಲರ್ ಸಂಪಾದನೆ ಮಾಡುವುದೂ ಹೊಸ ದಾಖಲೆಯೇ.

ಪಾಕಿಸ್ತಾನದ ಕ್ರಿಕೆಟಿಗ ಶೋಯೆಬ್ ಮಲಿಕ್‌ನನ್ನು ಮದುವೆಯಾಗಿ ಎರಡೂವರೆ ವರ್ಷಗಳಾದರೂ ಅಭಿಮಾನಿಗಳು ನಡುವೆ ಈಕೆಯ ಆಕರ್ಷಣೆ ಕುಂದಿಲ್ಲ. 5 ಅಡಿ 8 ಇಂಚು ಎತ್ತರದ ಈ ನೀಳಕಾಲುಗಳ ಸುಂದರಿ ಈಗ ಇನ್ನಷ್ಟು ಸ್ಲಿಮ್ ಆಗಿದ್ದಾಳೆ. 'ವ್ಯಾಯಾಮದಲ್ಲಿ ಸ್ವಲ್ಪ ವ್ಯತ್ಯಾಸ ಮಾಡಿಕೊಂಡಿದ್ದೇನೆ. ಹಾಗಾಗಿ ಸ್ಲಿಮ್ ಕಾಣಿಸುತ್ತೇನೆ. ತೂಕ ಮಾತ್ರ 57 ಕೇಜಿಯೇ ಇದೆ" ಎಂದು ನಗುತ್ತಾಳೆ. 26 ದಾಟಿದ ಬಳಿಕವೂ ಟೆನಿಸ್‌ನಲ್ಲಿ ಇನ್ನಷ್ಟು ಎತ್ತರಕ್ಕೆ ಏರಿದವರಿದ್ದಾರೆ. ಆದರೆ 'ಸಾನಿಯಾ ಹೀಗೆ ಫ್ಯಾಶನ್, ಪಾರ್ಟಿ ಎಂದೆಲ್ಲ ಓಡಾಡುತ್ತಿದ್ದರೆ ಟೆನಿಸ್‌ನಲ್ಲಿ 'ನಂಬರ್ ಒನ್' ಆಗುವುದು ಸಾಧ್ಯವೆ..' ಎಂದು ಯಾರೂ ಕೇಳುತ್ತಿಲ್ಲ ಎನ್ನುವುದೇ ಸೋಜಿಗ!



## ಮತ್ತೆ ಒಬಾಮ

ಅಮೆರಿಕದ ದೈತ್ಯ ಮಾಧ್ಯಮ ಸಂಸ್ಥೆಗಳ ಆಸೆ ಮತ್ತು ಸಮೀಕ್ಷೆ ಎರಡಕ್ಕೂ ವಿರುದ್ಧವೆಂಬಂತೆ ಬರಾಕ್ ಒಬಾಮ ಮತ್ತೆ ಅಧ್ಯಕ್ಷ ಪಟ್ಟ ಪಡೆದಿದ್ದಾರೆ. ನಾಲ್ಕು ವರ್ಷಗಳ ಎರಡನೇ ಅವಧಿಗೆ ಅಮೆರಿಕದ 44ನೇ ಅಧ್ಯಕ್ಷನಾಗಿ ಮರು ಆಯ್ಕೆ ಹೊಂದಿರುವ ಒಬಾಮರ ಲಕ್ಷಾಂತರ ಬೆಂಬಲಿಗರು ಖುಷಿಯಿಂದ ಕುಣಿದು ಕುಪ್ಪಳಿಸಿದ್ದಾರೆ. ಆದರೆ ಅಮೆರಿಕದ ಸ್ಥಿತಿ ನೋಡಿದರೆ, ಒಬಾಮ ಖುಷಿ ಹೆಚ್ಚು ದಿನ ಬಾಳುವಂತೆ ಕಾಣುವುದಿಲ್ಲ. ಒಬಾಮ ಮರು ಆಯ್ಕೆಯಿಂದ ಯೂರೋಪಿನ ದೇಶಗಳ ಬೃಹತ್ ಉದ್ಯಮಿಗಳಿಗೆ ಅಷ್ಟೇನೂ ಖುಷಿಯಾಗಿಲ್ಲ. ಇತ್ತೀಚಿನವರೆಗೂ ಅಮೆರಿಕದ ಆಡಳಿತ ಯಂತ್ರದ ಮೇಲೆ ಕಪಿಮುಷ್ಟಿ ಹೊಂದಿದ್ದ ಇಸ್ರೇಲಿಗರಿಗೂ ಖುಷಿಯಾಗಿಲ್ಲ. ಸಿಎನ್‌ಎನ್, ಫಾಕ್ಸ್ ನ್ಯೂಸ್ ಮುಂತಾದ ದೈತ್ಯ ಮಾಧ್ಯಮ ಸಂಸ್ಥೆಗಳಂತೂ ಒಬಾಮ ಮುಂದಿರುವ ಅಗಾಧ ಸವಾಲುಗಳನ್ನು ಈಗಲೇ ಎತ್ತಿ ತೋರಿಸಲು ಆರಂಭಿಸಿವೆ. ಇಂಟರ್‌ನೆಟ್‌ನಲ್ಲಿ ಹಲವು ಉಗ್ರ ಶ್ವೇತವಾದಿಗಳು 'ಕೆನಡಾಕ್ಕೆ ವಲಸೆ ಹೋಗುವ ಬಗ್ಗೆ' ಮಾತುಗಳನ್ನು ತೇಲಿ ಬಿಡತೊಡಗಿದ್ದಾರೆ!

ಹಾಗೆಂದು ಜನರ ತೀರ್ಮಾನವನ್ನು ಅಗೌರವಿಸಲು ಸಾಧ್ಯವೆ? ಅದರಲ್ಲೂ 2008ರ ಚುನಾವಣೆಯ ಹೊತ್ತಲ್ಲಿ ಇದ್ದುದಕ್ಕಿಂತ ಪ್ರತಿಕೂಲ ಪರಿಸ್ಥಿತಿ ಇದ್ದೂ, ಆಗಿನದ್ದಕ್ಕಿಂತ ಹೆಚ್ಚು ಪ್ರತಿನಿಧಿ ಮತಗಳನ್ನು ಪಡೆದು ಗೆದ್ದದ್ದು ಒಬಾಮ ಮಟ್ಟಿಗೆ ದೊಡ್ಡ ಸಾಧನೆಯೇ. 6 ಶತಕೋಟಿ ಅಮೆರಿಕನ್ ಡಾಲರ್‌ಗಳನ್ನು ಹುಡಿ ಹಾರಿಸಿದ, ಜಗತ್ತಿನ ಈ ಅತ್ಯಂತ ದುಬಾರಿ ಚುನಾವಣೆಯಲ್ಲಿ ಒಬಾಮ ಗೆಲುವು ಮಧ್ಯೆ ಮತ್ತು ಎಡಪಂಥೀಯ ವಾದಿಗಳ ಖುಷಿ ಹೆಚ್ಚಿಸಿದೆ. ಆ್ಯಕ್ಟಿವಿಸ್ಟ್ ಸರಕಾರ ಮತ್ತು ಎಲ್ಲ ನಾಗರಿಕರ ಸಾಮಾಜಿಕ ಭದ್ರತೆಯ ಬಗ್ಗೆ ಒಬಾಮ ಒತ್ತಿ ಹೇಳುತ್ತಿರುವುದು ಅಮೆರಿಕದಲ್ಲಿ ನೆಲೆಸಿರುವ 12 ದಶಲಕ್ಷ ಅಕ್ರಮ ವಲಸಿಗರೂ ಸಮಾಧಾನದ ನಿಟ್ಟುಸಿರು ಬಿಡುವಂತೆ ಮಾಡಿದೆ.

ಮುಖ್ಯವಾಗಿ ಒಬಾಮ ಥ್ಯಾಂಕ್ಸ್ ಹೇಳಬೇಕಿರುವುದು ಒಸಾಮಾ ಬಿನ್ ಲಾಡೆನ್‌ಗೆ! ಹಾಗೆಂದು ಅಧ್ಯಕ್ಷ ಒಬಾಮ ಸರ್ವತಂತ್ರ ಸ್ವತಂತ್ರರಲ್ಲ. ದೇಶದ ಮಿಲಿಟರಿ ಕಮಾಂಡರ್ ಆದರೂ ಒಬಾಮಗೆ ಯುದ್ಧ ಸಾರಲು ಕಾಂಗ್ರೆಸ್ ಅನುಮತಿ ಬೇಕು. ಫೆಡರಲ್, ಸುಪ್ರೀಂಕೋರ್ಟ್ ನ್ಯಾಯಾಧೀಶರನ್ನು ನೇಮಿಸುವ ಅಧಿಕಾರ ಇದ್ದರೂ ಅದಕ್ಕೆ ಸೆನೆಟ್ ದೃಢೀಕರಣ ಬೇಕು. ಇಲ್ಲಿನ 50 ಗವರ್ನರ್ ಗಳಿಗೂ ಸಾಕಷ್ಟು ಸ್ವತಂತ್ರ ಅಧಿಕಾರಗಳಿವೆ. ವ್ಯವಸ್ಥೆಯ ಜತೆಗೆ ಒಬಾಮ ಇನ್ನೊಂದು ಅವಧಿಯಲ್ಲಿ ಹೇಗೆ ಏಗಲಿದ್ದಾರೆ ಎಂಬುದನ್ನು ಇಡೀ ಜಗತ್ತೇ ಕಾದು ನೋಡುತ್ತಿದೆ! ■

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65